ಕರ್ನಾಟಕ ವಿಧಾನ ಪರಿಷತ್

140ನೇ ಅಧಿವೇಶನ -2020

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. | 29(60) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕಾಂತ್‌ರಾಜ್(ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) |
| ಉತ್ತರಿಸಬೇಕಾದ ದಿನಾಂಕ | 02.03.2020 |

| | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರು ವಿಶ್ವವಿದ್ಯಾಲಯವನ್ನು ಬೇರೆಡೆಗೆ ಸ್ಥಳಾಂತರಿಸಲು ಸರ್ಕಾರ ಇಲ್ಲಿಯ ತನಕ ಕೈಗೊಂಡಿರುವ ಕಾರ್ಯಕ್ರಮಗಳೇನು;(ವಿವರ ನೀಡುವುದು) | ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿ ಬಿದರಕಟ್ಟೆ ಗ್ರಾಮದ ವ್ಯಾಪ್ತಿಯ 240 ಎಕರೆ 10 ಗುಂಟೆ ಜಮೀನನ್ನು ರಾಜ್ಯ ಸರ್ಕಾರದ ಅರಣ್ಯ ಇಲಾಖೆಯಿಂದ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ತುಮಕೂರು ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆ.<br><br>ಸರ್ಕಾರದಿಂದ ಒದಗಿಸಲಾದ ರೂ 5.00 ಕೋಟಿ ಅನುದಾನದ ವೆಚ್ಚದಲ್ಲಿ ತುಮಕೂರು ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿ ಕೈಗೊಳ್ಳಲು ಯೋಜಿಸಲಾಗಿರುವ ಮುಖ್ಯ ಪ್ರವೇಶ ದ್ವಾರ ಹಾಗೂ 2 ಚಿಕ್ಕ ದ್ವಾರಗಳ ನಿರ್ಮಾಣ ಕಾಮಗಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆಇಡಿ 82 ಯುಟಿಐ 2016, ದಿನಾಂಕ:27.01.2017ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಸಮಾಜ ಕಲ್ಯಾಣ ಇಲಾಖೆಯ ಅನುಸೂಚಿತ ಜಾತಿಗಳ ವಿಶೇಷ ಘಟಕ ಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಬುಡಕಟ್ಟು ಉಪಯೋಜನೆ (ಟಿ.ಎಸ್.ಪಿ)ಗಳಡಿಯಲ್ಲಿ ಮಂಜೂರು ಮಾಡಿದ ಒಟ್ಟು ರೂ 17.50 ಕೋಟಿಗಳ ವೆಚ್ಚದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯರ ವಸತಿನಿಲಯ, ಸ್ನಾತಕೋತ್ತರ ವಿದ್ಯಾರ್ಥಿನಿಯರ ವಸತಿ ನಿಲಯ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ವಸತಿನಿಲಯಗಳನ್ನು ನೂತನ ಕ್ಯಾಂಪಸ್‌ನಲ್ಲಿ ನಿರ್ಮಿಸಲು ಯೋಜಿಸಲಾಗಿರುವ ಕಾಮಗಾರಿಗಳ ಅಂದಾಜುಗಳಿಗೆ ಸರ್ಕಾರದ ಆದೇಶಗಳ ಸಂಖ್ಯೆಇಡಿ 82 ಯುಟಿಐ 2016, ದಿನಾಂಕ:27.01.2017ಗಳಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳ ನಿರ್ವಹಣೆಯನ್ನು ರೈಟ್ಸ್ ಲಿಮಿಟೆಡ್ ಸಂಸ್ಥೆಗೆ ವಹಿಸಲಾಗಿದೆ. ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ. ಮುಂದುವರೆದು, ರೂ. 2.50 ಕೋಟಿ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯು ಕುಣಿಗಲ್ ಮುಖ್ಯರಸ್ತೆಯಿಂದ ನೂತನ ಕ್ಯಾಂಪಸ್‌ಗೆ ನಿರ್ಮಿಸಿರುವ ಸಂಪರ್ಕ ರಸ್ತೆಯು ಬಳಕೆಗೆ ಮುಕ್ತವಾಗಿರುತ್ತದೆ.<br><br>ತುಮಕೂರು ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ನಿರ್ಮಾಣಕ್ಕೆ ಯೋಜಿಸಲಾಗಿರುವ ಕಾಮಗಾರಿಗಳ ಪೈಕಿ ಮೊದಲ ಹಂತದಲ್ಲಿ ರೂ.80.00 ಕೋಟಿಗಳ ಅಂದಾಜುಗಳಿಗೆ ಸೀಮಿತಗೊಳಿಸಿ ಕಾಮಗಾರಿಗಳನ್ನು ತುಮಕೂರು ವಿಶ್ವವಿದ್ಯಾಲಯದಿಂದ ಹಾಗೂ ಸರ್ಕಾರದಿಂದ ತಲಾ ರೂ.40.00 ಕೋಟಿಗಳ ವೆಚ್ಚ ಭರಿಸುವ |

--2

<table>
<tr>
<td></td>
<td></td>
<td>ಮೂಲಕ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಇಡಿ 440 ಯುಇವಿ 2016, ದಿನಾಂಕ:22.06.2017ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ಕಾಮಗಾರಿಗಳ ನಿರ್ವಹಣೆಯನ್ನು ರೈಟ್ಸ್ ಲಿಮಿಟೆಡ್ ಸಂಸ್ಥೆಗೆ ವಹಿಸಲಾಗಿದೆ.<br><br>ಕೇಂದ್ರ ಸರ್ಕಾರದ ರೂಸಾ ಅನುದಾನದಡಿ ಒದಗಿಸಲಾಗಿರುವ ರೂ 5.53 ಕೋಟಿಗಳ ವೆಚ್ಚದಲ್ಲಿ ಆರಂಭಿಸಲಾಗಿರುವ ಬಾಲಕರ ವಿದ್ಯಾರ್ಥಿ ನಿಲಯ ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ.<br>ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಒದಗಿಸಲಾಗಿರುವ ರೂ 2.00 ಕೋಟಿಗಳ ವೆಚ್ಚದಲ್ಲಿ ಉಪ-ಪ್ರಾದೇಶಿಕ ಕೇಂದ್ರ ನಿರ್ಮಿಸಲು, ಯುಜಿಸಿ ಅನುದಾನ ಹಾಗೂ ಆಂತರಿಕ ಸಂಪನ್ಮೂಲಗಳಿಂದ ಭರಿಸುವ ಮೂಲಕ ರೂ 4.75 ಕೋಟಿಗಳ ವೆಚ್ಚದಲ್ಲಿ ಕಲಾ ಭವನ ಕಟ್ಟಡವನ್ನು ನಿರ್ಮಿಸಲು ಹಾಗೂ ಅನುಸೂಚಿತ ಜಾತಿಗಳ ವಿಶೇಷ ಘಟಕ ಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಬುಡಕಟ್ಟು ಉಪಯೋಜನೆ (ಟಿ.ಎಸ್.ಪಿ)ಗಳಡಿಯಲ್ಲಿ ಮಂಜೂರು ಮಾಡಿದ ರೂ 4.30 ಕೋಟಿ ವೆಚ್ಚದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 20 ಯುಟಿಟಿ 2018ರಲ್ಲಿ ನೀಡಲಾದ ಆಡಳಿತಾತ್ಮಕ ಅನುಮೋದನೆಯನ್ವಯ ಪರೀಕ್ಷಾ ಪೂರ್ವ ಸಿದ್ಧತಾ/ತರಬೇತಿ ಕೇಂದ್ರ ನಿರ್ಮಿಸುವ ಕಾಮಗಾರಿಗಳನ್ನು ಸದ್ಯದಲ್ಲಿಯೇ ಆರಂಭಿಸಲಾಗುತ್ತದೆ.</td>
</tr>
<tr>
<td>ಆ</td>
<td>ವಿಶ್ವವಿದ್ಯಾಲಯಕ್ಕೆ ಕ್ಯಾಂಪಸ್ ನಿರ್ಮಾಣ ಮಾಡಲು ಎಲ್ಲಿ ಎಷ್ಟು ಸ್ಥಳವನ್ನು ಗುರುತಿಸಲಾಗಿದೆ; (ವಿವರ ನೀಡುವುದು)</td>
<td>. ತುಮಕೂರು ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ನಿರ್ಮಾಣಕ್ಕಾಗಿ ತುಮಕೂರು ತಾಲ್ಲೂಕಿನ ಹೊಬ್ಳೂರು ಹೋಬಳಿಗೆ ಒಳಪಡುವ ಈ ಕೆಳಕಂಡ ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 240 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು ಮಂಜೂರು ಮಾಡಲಾಗಿದೆ.
<table>
<tr><th>ಗ್ರಾಮ</th><th>ಸರ್ವೆ ನಂ</th><th>ವಿಸ್ತೀರ್ಣ</th></tr>
<tr><td>ಬಿದರಕಟ್ಟೆ</td><td>23,24,25,26,<br>ಆರ್.ಎಸ್(112)<br>ಹಾಗೂ 34</td><td>103 ಎಕರೆ 34 ಗುಂಟೆ</td></tr>
<tr><td>ತಿಮ್ಮಸಂದ್ರ</td><td>17, 18</td><td>51 ಎಕರೆ 17 ಗುಂಟೆ</td></tr>
<tr><td>ದೊಮ್ಮನಕುಪ್ಪೆ</td><td>32</td><td>84 ಎಕರೆ 39 ಗುಂಟೆ</td></tr>
<tr><td colspan="2">ಒಟ್ಟು</td><td>240 ಎಕರೆ 10 ಗುಂಟೆ</td></tr>
</table>
</td>
</tr>
<tr>
<td>ಇ</td>
<td>ರಾಜ್ಯ ಸರ್ಕಾರ ತಾಂತ್ರಿಕ ಶಿಕ್ಷಣ ಸೇರಿದಂತೆ ನವೀನ ರೀತಿಯ ಇನ್ನೋವೇಟಿವ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಯು.ಜಿ.ಸಿ.ಯಿಂದ ಅನುದಾನವನ್ನು ಪಡೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ; ಸಲ್ಲಿಸಿದಲ್ಲಿ ಯಾವಾಗ ಸಲ್ಲಿಸಲಾಗಿದೆ; ಎಷ್ಟು ಅನುದಾನವನ್ನು ಕೋರಲಾಗಿದೆ; (ವಿವರ ನೀಡುವುದು)</td>
<td>ನವೀನ ರೀತಿಯ ಇನ್ನೋವೇಟಿವ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಯು.ಜಿ.ಸಿ.ಯಿಂದ ಅನುದಾನವನ್ನು ಪಡೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದಿಲ್ಲ. ಇನ್ನೋವೇಟಿವ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಉದ್ದೇಶಿಸಿ ಉಪಕ್ರಮಿಸಲಾಗಿದ್ದ ಪ್ರಸ್ತಾವನೆಯನ್ನು ಕೈಬಿಡಲಾಗಿದೆ</td>
</tr>
</table>

--3

| | | |
|---|---|---|
| ಈ | ತುಮಕೂರು ನಗರ ಸ್ಮಾರ್ಟ್ ಸಿಟಿ ಅನುದಾನವನ್ನು ಬಳಸಿಕೊಂಡಂತೆ ಸರ್ಕಾರದ ಮತ್ತು ಯುಜಿಸಿ ಅನುದಾನವನ್ನು ಬಳಸಿಕೊಂಡು ಹೈಟೆಕ್ ವಿಶ್ವವಿದ್ಯಾನಿಲಯ ನಿರ್ಮಾಣ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? | ಉದ್ಭವಿಸುವುದಿಲ್ಲ |

ಇಡಿ/8/ಯುಟಿಐ/2020

(ಡಾ॥ ಅಶ್ವಥ್‌ನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)